## ರೈತರ ದುಂಡುಮೇಜಿನ ಸಭೆ ಒತ್ತಾಯ

# 'ಬಹುರಾಷ್ಟ್ರೀಯ ಕಂಪನಿಗಳ ನೆರವು ತಿರಸ್ಕರಿಸಿ'

ಕಲಬುರ್ಗಿ, 6- ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳು ನಡೆಸುವ ಸಂಶೋಧನೆಯಲ್ಲಿ ರೈತರ ಸಲಹೆ- ಸೂಚನೆ ಹಾಗೂ ಅಭಿಪ್ರಾಯಗಳಿಗೆ ಆದ್ಯತೆ ನೀಡಬೇಕೆಂದು ಇತ್ತೀಚೆಗೆ ಇಲ್ಲಿ ನಡೆದ ರೈತರ ದುಂಡು ಮೇಜಿನ ಸಭೆ ಒತ್ತಾಯಿಸಿದೆ.

ಕಳೆದ ವರ್ಷ ಬೆಂಗಳೂರಿನಲ್ಲಿ ನಡೆದ 'ರೈತ ತೀರ್ಪು' ಕಾರ್ಯಕ್ರಮದಲ್ಲಿ ರೈತರು ನೀಡಿದ ತೀರ್ಪುಗಳನ್ನು ಅನುಷ್ಠಾನ ಮಾಡುವ ಸಾಧ್ಯತೆಗಳ ಕುರಿತು ಇಲ್ಲಿ ನಡೆದ ರೈತರ ಸಭೆಯು ಸಂಶೋಧನೆಗಳ ವಿವಿಧ ಆಯಾಮಗಳನ್ನು ಚರ್ಚಿಸಿತು.

ರೈತ ಸಂಘಟನೆಗಳ ಮುಖಂಡರು, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ರೈತರು ಸೇರಿದಂತೆ ಒಟ್ಟು 40 ಜನರು ಈ ಸಭೆಯಲ್ಲಿ ಭಾಗವಹಿಸಿದ್ದರು. 'ದಕ್ಷಿಣ ವಿಷ್ಯಾದಲ್ಲಿ ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣ ಮೈತ್ರಿಕೂಟ' ('ಆದರ್ಶ') ರಾಜ್ಯದಲ್ಲಿ ನಡೆಸಿದ ಮೂರನೇ ದುಂಡು ಮೇಜಿನ ಸಭೆ ಇದಾಗಿತ್ತು.

ಸರ್ಕಾರದಿಂದ ಅನುದಾನ ಪಡೆಯುವ ಕೃಷಿ ವಿಶ್ವವಿದ್ಯಾಲಯಗಳು, ತಮ್ಮ ಚಟುವಟಿಕೆಗಳಿಗೆ ಬಹುರಾಷ್ಟ್ರೀಯ ಕಂಪನಿಗಳಿಂದ ಧನಸಹಾಯ ಪಡೆಯಬಾರದು ಎಂದು ಒತ್ತಾಯಿಸಿದ ಸಭೆಯು, ಕೃಷಿ ಸಂಶೋಧನೆಯು ಕೇವಲ ಒಮ್ಮುಖವಾಗದೇ ಅದರ ಪ್ರಜಾತಾಂತ್ರೀಕರಣವಾಗುವ ಅಗತ್ಯವನ್ನು ಪ್ರತಿಪಾದಿಸಿತು.

ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಬಸವರಾಜ ತಂಬಾಕೆ ಮಾತನಾಡಿ, ದೇಶದ ಶೇ. 70ರಷ್ಟು ಜನಸಂಖ್ಯೆ ಕೃಷಿಯ ಮೇಲೆಯೇ ಅವಲಂಬಿತವಾಗಿದ್ದರೂ ಸಂಸತ್ತು ಅಥವಾ ವಿಧಾನಸಭೆಯಲ್ಲಿ ಕೃಷಿಕರಿಗೆ ಆದ್ಯತೆ ಸಿಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.


ಕಲಬುರ್ಗಿಯಲ್ಲಿ ನಡೆದ ರೈತರ ದುಂಡು ಮೇಜಿನ ಸಭೆಯಲ್ಲಿ ವಿವಿಧ ರೈತ ಸಂಘಟನೆಗಳ ಮುಖಂಡರಾದ ಬಸವರಾಜ ತಂಬಾಕೆ, ವಿಶ್ವನಾಥ ಪಾಟೀಲ, ವಿ.ಜಿ. ದೇಸಾಯಿ ಹಾಗೂ ಇನ್ನಿತರ ರೈತರು ಪಾಲ್ಗೊಂಡಿದ್ದರು.

ತೊಗರಿ ಬೆಳೆಗಾರರ ಸಂಘದ ಅಧ್ಯಕ್ಷ ಬಸವರಾಜ ಇಂಗಿನ ಮಾತನಾಡಿ, ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸುವಾಗ ರೈತರ ಜೊತೆ ಸಮಾಲೋಚಿಸಿಯೇ ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

'ಆದರ್ಶ'ದ ದಕ್ಷಿಣ ವಿಷ್ಯಾ ಸಂಚಾಲಕ ಪಿ.ವಿ. ಸತೀಶ್ ಪ್ರಾಸ್ತಾವಿಕವಾಗಿ ಮಾತನಾಡಿ, ರೈತರ ಬೇಕು-ಬೇಡಗಳತ್ತ ಗಮನಹರಿಸದೇ ನಡೆಯುತ್ತಿರುವ ಸಂಶೋಧನೆಗಳು ಕೃಷಿ ಕ್ಷೇತ್ರದ ಬಿಕ್ಕಟ್ಟಿಗೆ ಕಾರಣವಾಗಿವೆ. ಈ ಹಿನ್ನೆಲೆಯಲ್ಲಿ ರೈತರ ದನಿಗೆ ವೇದಿಕೆ ಕಲ್ಪಿಸಿದ್ದು ರೈತ ತೀರ್ಪು ಕಾರ್ಯಕ್ರಮ ಎಂದು ಬಣ್ಣಿಸಿದರು.

ರೈತ ಕೃಷಿ ಕೂಲಿಕಾರರ ಸಂಘದ ಮುಖಂಡ ವಿ.ಜಿ. ದೇಸಾಯಿ, ರೈತ ಸಂಘದ ಮುಖಂಡರಾದ ವಿಶ್ವನಾಥ ಪಾಟೀಲ, ಸಿದ್ರಾಮಪ್ಪ, ದೇವೇಂದ್ರಪ್ಪ ಭೋಯಿ, ರಾಚರೆಡ್ಡಿ ಮತ್ತಿತರರು ಮಾತನಾಡಿದರು.

ನಿರ್ಣಯಗಳು

ಜಗತ್ತಿನಲ್ಲಿ ಮೊದಲ ಬಾರಿಗೆ ನಡೆದ 'ರೈತ ತೀರ್ಪು' ಕಾರ್ಯಕ್ರಮದಲ್ಲಿ ಧ್ವನಿವಂಚಿತ, ಬುಡಕಟ್ಟು, ದಲಿತ ವರ್ಗದ ಸಣ್ಣ ರೈತರು ತಮಗೆ ಎಂಥ ಸಂಶೋಧನೆ ಬೇಕು ಎಂಬ ತೀರ್ಪು ನೀಡಿದ್ದಾರೆ. ಈ ತೀರ್ಪುಗಳನ್ನು ಅನುಷ್ಠಾನ ಮಾಡಲು ಗ್ರಾಮ ಮಟ್ಟದಲ್ಲಿ ಚರ್ಚಿಸಬೇಕು. ಕೃಷಿ ಸಂಶೋಧಕರು ರೈತರ ಅಭಿಪ್ರಾಯಕ್ಕೆ ಆದ್ಯತೆ ನೀಡಬೇಕು ಎಂಬಿತ್ಯಾದಿ 10 ನಿರ್ಣಯಗಳನ್ನು ಅಂಗೀಕರಿಸಲಾಯಿತು. ಬಯಲುಸೀಮೆ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕ ಸುಬ್ಬಣ್ಣ ಬಿರಾದಾರ ವಂದಿಸಿದರು.